# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 4/2024

ಸಿಡಬ್ಲ್ಯೂಃ 1 ಪಿಡಬ್ಲ್ಯೂಃ 3

| | |
|---|---|
| ಹೆಸರುಃ | ವಸಂತ ಸುಬ್ರಾಯ ಹೆಗಡೆ |
| ತಂದೆ/ಗಂಡನ ಹೆಸರುಃ | ಸುಬ್ರಾಯ ಹೆಗಡೆ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಬಿದ್ರಮನೆ, ಸಿದ್ದಾಪುರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 09-01-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ 08-11-2023 ರಂದು ನಾನು ಹಾಗೂ ನನ್ನ ತಂದೆ ಸುಬ್ರಾಯ ರಾಮ ಹೆಗಡೆ ಇವರು ಬೆಳಿಗ್ಗೆ 7-15 ಕ್ಕೆ ಬಿದ್ರಮನೆಯಲ್ಲಿರುವ ನಮ್ಮ ಮನೆಯಿಂದ ಹೊರಟು, ನಮ್ಮ ಬೈಕ್ ನಂ. ಕೆ ಎ 31 ಇಸಿ 4920 ರಲ್ಲಿ ಹೆರೂರು ಗಣಪತಿ ದೇವಸ್ಥಾನಕ್ಕೆ ಗಣಪತಿ ಹೋಮವನ್ನು ಕೆಳಲು ಹೋರಟಿದ್ದೆವು. ಗಾಡಿಯನ್ನು ನಾನೇ ಚಲಾಯಿಸುತ್ತಿದ್ದೆ. ಬೆಳಿಗ್ಗೆ 7-45 ಗಂಟೆ ಸುಮಾರಿಗೆ ಹೂಡ್ಲುಮನೆ ಮತ್ತು ತಟ್ಟೆಕೈ ಕ್ರಾಸ್ ಬಳಿ ತಿರುವು ತೆಗೆದುಕೊಂಡು ಹೆರೂರು ಗ್ರಾಮದ ಕಡೆ ಬಂದು ರಸ್ತೆಯ ಎಡಭಾಗದಲ್ಲಿ ಬಂದು ನಿಂತಿದ್ದೆವು. 50 ಫೂಟ್ ಅಂತರದಲ್ಲಿ ಒಂದು ಮಹೇಂದ್ರ ಬೂಲೆರೂ ಪಿಕ್ ವಾಹನ ಸಂಖ್ಯೆ ಕೆಎ 31 /9376 ಅತೀವೇಗವಾಗಿ ಹಾಗೂ ನಿರ್ಲಕ್ಷತನದಿಂದ ಹಾಗೂ ಅಸುರಕ್ಷಿತವಾಗಿ ಚಲಾಯಿಸಿಕೊಂಡು ಬಂದು, ನಮ್ಮ ಗಾಡಿಗೆ ಡಿಕ್ಕಿ ಹೊಡೆದು ಅಪಘಾತಪಡಿಸಿರುತ್ತಾರೆ. ನಂತರ ಸದರಿ ವಾಹನದ ಚಾಲಕ ನಮ್ಮನ್ನು ನೋಡದೇ ಹಾಗೆಯೇ ಚಲಾಯಿಸಿಕೊಂಡು ಹೋಗಿರುತ್ತಾನೆ. ಅಪಘಾತವಾದ ಪರಿಣಾಮ ನನ್ನ ತಂದೆಯವರ ಎಡ ಹಣೆಗೆ ಹೆಕ್ಕಿ ಹೊಡೆತ ಆಗಿತ್ತು, ಮುಖಕ್ಕೆ , ತಲೆಯ ಹಿಂಬಾಗ, ಬಲ ಮೊಣಕೈ, ಬಲ ಮೊಣಕಾಲು ಮತ್ತು ಬಲಭಾಗದ ಸಂಪೂರ್ಣ ದೇಹಕ್ಕೆ ಗಾಯ ಉಂಟಾಗಿ ಅವರುಕ ಪ್ರಜ್ಞಾಹಿನ ಸ್ಥಿತಿಯಲ್ಲಿ ಬಿದ್ದಿದ್ದರು. ನನಗೂ ಸಹಿತ ಬಲ ಹಾಗೂ ಎಡಭಾಗದ ಮಂಡಿ, ಹಿಮ್ಮಡಿ, ಬಲಭುಜಕ್ಕೆ ಪೆಟ್ಟಾಗಿತ್ತು. ನನ್ನ ಬೈಕ್ ಶಿರಸಿ ಕಡೆ ಮತ್ತು ಹೂಡ್ಲಮನೆ ಕಡೆಯ ಮಧ್ಯದಲ್ಲಿ ಮುಖಮಾಡಿ ರಸ್ತೆಯ ಮೇಲೆ ಸ್ವಲ್ಪ ಸಿಡಿದು ಬಿದ್ದಿತ್ತು. ಆ ನಂತರ ಸದರಿ ಬೈಕ್ ನ್ನು ಡಾಂಬರ್ ರಸ್ತೆಯ ಪಕ್ಕ ಮಣ್ಣಿನ ರಸ್ತೆಯಲ್ಲಿ ಶಿರಸಿ ಕಡೆ ಮುಖಮಾಡಿ ನಿಲ್ಲಿಸಿರುತ್ತೇನೆ. ಆ ನಂತರ 100 ಮೀ ದೂರದಲ್ಲಿರುವ ಜಗದೀಶ ಸೀತಾರಾಮ ಹೆಗಡೆ ತಟ್ಟೆಕೈ ರವರ ಮನಗೆ ಹೋಗಿ ಅವರ ಮಾರುತಿ 800 ಕಾರನ್ನು ನಾನೇ ಚಲಾಯಿಸಿಕೊಂಡು ನನ್ನ ತಂದೆಯವರನ್ನು ತೆಗೆದುಕೊಂಡು ಶಿರಸಿ ಟಿ ಎಸ್ ಎಸ್ ಆಸ್ಪತ್ರೆಗೆ

ಕರೆದುಕೊಂಡು ಹೋಗಿರುತ್ತೇನೆ. ನನ್ನ ತಂದೆಯವರನ್ನು ಕಾರಿನಲ್ಲಿ ಕರೆದುಕೊಂಡು ಹೋಗುವ ಕಾಲಕ್ಕೆ ಅವರು ಕೋಮಾಕ್ಕೆ ಹೋಗಿದ್ದರು. ನನ್ನ ತಂದೆಯವರಿಗೆ ಟಿ ಎಸ್ ಎಸ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ್ದು ನಂತರ ನನ್ನ ತಂದೆಯವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಎಸ್ ಡಿ ಎಂ ಧಾರವಾಡ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಅವರನ್ನು ಎಸ್ ಡಿ ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಪ್ರಯಾಣ ಮಧ್ಯದಲ್ಲಿ ಮುಂಡಗೋಡ ಆಸ್ಪತ್ರೆ ಪರೀಕ್ಷೆ ಮಾಡಿರುತ್ತಾರೆ. ನಂತರ ಎಸ್ ಡಿ ಎಂ ಧಾರವಾಡ ಆಸ್ಪತ್ರೆಯಲ್ಲಿ ನನ್ನ ತಂದೆಯನ್ನು ಐ ಸಿ ಯು ನಲ್ಲಿ ದಾಖಲಿಸಿರುತ್ತಾರೆ. ನಂತರ ಚಾಸಾ- 20 ರವರು ಮಾರನೇಯ ದಿನ ದಿಃ 09-11-2023 ರಂದು ಮಧ್ಯಾಹ್ನ 3-00 ಗೆ ಎಸ್ ಡಿ ಎಂ ಧಾರವಾಡ ಆಸ್ಪತ್ರೆಯಲ್ಲಿ ನನ್ನ ಲಿಖಿತ ದೂರನ್ನು ಪಡೆದುಕೊಂಡಿರುತ್ತಾರೆ. ನನಗೆ ಆರೋಪಿತನ ಹೆಸರು ಮತ್ತು ಗಾಡಿಯ ವಿವರ ತಿಳಿದ ನಂತರ ದಿಃ 11-11-2023 ಹಾಗೂ ದಿಃ 12-11-2023 ರಂದು ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ. ದಿಃ 12-11-2023 ರಂದು ನಾನು ಸಿದ್ದಾಪುರ ಪೋಲೀಸ ಠಾಣೆಗೆ ಬಂದು ಆರೋಪಿತನು ಚಲಾಯಿಸುತ್ತಿದ್ದ ಗಾಡಿಯನ್ನು ನೋಡಿ ಗುರುತಿಸಿರುತ್ತೇನೆ.

2. ದಿಃ 10-11-2023 ರಂದು ಮಧ್ಯಾಹ್ನ 3-00 ಗಂಟೆಗೆ ನನ್ನ ತಂದೆಯವರು ಎಸ್ ಡಿ ಎಂ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣಾನಂತರ ನನ್ನ ತಂದೆಯವರ ಮರಣೊತ್ತರ ಪರೀಕ್ಷೆಯನ್ನು ಎಸ್ ಡಿ ಎಂ ಆಸ್ಪತ್ರೆಯಲ್ಲಿ ಸಿದ್ದಾಪುರ ಪೋಲೀಸರ ಸಮಕ್ಷಮ ಮಾಡಲಾಯಿತು. ದಿಃ 11-11-2023 ರಂದು ಸಂಜೆ 6-30 ಕ್ಕೆ ನಾವು ಶಿರಸಿಯಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ಮಾಡಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಕಡತದಲ್ಲಿರುವ ಲಿಖಿತ ದೂರನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-9 ಮತ್ತು ನಿ.ಪಿ-9 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ಶವ ಪಂಚನಾಮೆ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-10 ಮತ್ತು ನಿ.ಪಿ-10 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ಐದು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ-11 ರಿಂದ ನಿ.ಪಿ-15 ಎಂದು ಗುರುತಿಸಲಾಯಿತು. ಸಾಕ್ಷಿ ವಾಹನ ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರದಲ್ಲಿ ಇರುವ

ಬೂಲೆರೊ ಪಿಕ್ ಅಪ್ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ನನ್ನ ತಂದೆಯ ಸಾವಿಗೆ ಆರೋಪಿತನ ಅತಿವೇಗ , ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ವಾಹನ ಚಾಲನೆ ಕಾರಣವಾಗಿರುತ್ತದೆ. ಸಾಕ್ಷಿಯು ನಿ.ಪಿ-7 ಮತ್ತು 8 ಭಾವಚಿತ್ರದಲ್ಲಿ ಇರುವ ತನ್ನ ಗಾಡಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ಎನ್ ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**